THE TIMES OF INDIA
**KANNADA**

Thursday, January 14th, 2010

# ಭ್ರಷ್ಟರ ರಕ್ಷಿಸುವ ಸರ್ಕಾರ

## ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ನ್ಯಾ. ಸಂತೋಷ ಹೆಗಡೆ ವಿಷಾದ

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** 'ಸ್ವಾತಂತ್ರ್ಯ ಬಂದ ಹೊಸತರಲ್ಲೂ ಭ್ರಷ್ಟರಿದ್ದರು. ಆಗ ಅಂತಹವರನ್ನು ಹುಡುಕಲು ಮೈಕ್ರೊಸ್ಕೋಪ್ ಬೇಕಿತ್ತು. ಈಗ ಪ್ರಾಮಾಣಿಕರನ್ನು ಪತ್ತೆ ಮಾಡಲು ಮೈಕ್ರೊಸ್ಕೋಪ್ ಬಳಸಬೇಕಾಗಿದೆ. ಸಮಾಜದ ಮನೋಭಾವವೇ ಇದಕ್ಕೆ ಕಾರಣ' ಎಂದವರು ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ ಹೆಗಡೆ.



**ಸಂದರ್ಭ:** ನಗರದ ಭಗವಾನ್ ಮಹಾವೀರ ಜೈನ್ ಕಾಲೇಜಿನ ಕನ್ನಡ ಸಂಘ ಬುಧವಾರ ಹಮ್ಮಿಕೊಂಡಿದ್ದ ಸಮಾಜದ ಪ್ರಸ್ತುತ ಸ್ಥಿತಿಗತಿ ಕುರಿತು ಸಂವಾದ ಮತ್ತು ಜಾಗೃತಿ ಹಬ್ಬ. 2006ರ ಆಗಸ್ಟ್ 3ರಂದು ಕರ್ನಾಟಕ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಂಡ ನಂತರ ನ್ಯಾ. ಹೆಗಡೆ ವಿದ್ಯಾರ್ಥಿಗಳೊಂದಿಗೆ ನಡೆಸಿದ 133ನೇ ಸಂವಾದ ಇದು. ಲೋಕಾಯುಕ್ತರು ಹೇಳಿದ್ದಿಷ್ಟು–

'ಸ್ವಾತಂತ್ರ್ಯ ಬಂದ 63 ವರ್ಷಗಳಲ್ಲಿ ದೇಶದಲ್ಲಿ ಬೆಳೆದದ್ದು ಭ್ರಷ್ಟಾಚಾರ ಮತ್ತು ದುರಾಡಳಿತ. ಭ್ರಷ್ಟಾಚಾರ ನಿಯಂತ್ರಿಸಲು ಸಾಧ್ಯವಿದ್ದಾಗ ನನ್ನ ಮತ್ತು ನಂತರದ ಪೀಳಿಗೆ ಸುಮ್ಮನಿತ್ತು. ಈಗ ಸಮಾಜವೇ ಭ್ರಷ್ಟಾಚಾರವನ್ನು ಒಪ್ಪಿಕೊಂಡಿದೆ. ಭ್ರಷ್ಟಾಚಾರ ಮತ್ತು ದುರಾಡಳಿತ, ಅಧಿಕಾರಿಗಳು ಮತ್ತು ರಾಜಕಾರಣಿಗಳು ಇವೆರಡೂ ಸಯಾಮಿ ಅವಳಿಗಳಿದ್ದಂತೆ. ದುರಾಡಳಿತ ಇಲ್ಲದಿದ್ದರೆ ಭ್ರಷ್ಟತೆ ಇರುವುದಿಲ್ಲ. ಭ್ರಷ್ಟತೆಗೆ ಆಸ್ಪದ ಇಲ್ಲದಿದ್ದರೆ ದುರಾಡಳಿತವೂ ಇರುವುದಿಲ್ಲ. ಅಧಿಕಾರಿ ನಿಷ್ಠಾವಂತನಾಗಿದ್ದರೆ ರಾಜಕಾರಣಿ ಭ್ರಷ್ಟನಾಗಲು ಸಾಧ್ಯವಾಗುವುದಿಲ್ಲ. ರಾಜಕಾರಣಿ ಪ್ರಾಮಾಣಿಕನಾಗಿದ್ದರೆ ಅಧಿಕಾರಿ ತಪ್ಪು ಹಾದಿ ಹಿಡಿಯಲು ಅವಕಾಶ ಆಗುವುದಿಲ್ಲ ಎಂದರು.

### ಸಂವಾದದ ಝಲಕ್

- **ಲೋಕಾಯುಕ್ತ ಹುದ್ದೆಗೆ ಮಹಿಳೆ ನೇಮಕವಾದರೆ ಉತ್ತಮವಾಗಿ ಕೆಲಸ ಮಾಡಲು ಸಾಧ್ಯವೇ?**
  ಕೆಲಸ ಮಾಡುವ ಮನಸ್ಸಿದ್ದರೆ ಮಹಿಳೆಯಾದರೇನು? ಪುರುಷರಾದರೇನು?
- **ಸಂಪುಟ ದರ್ಜೆ ಸಚಿವರ ವಿರುದ್ಧ ದಾಳಿ ಯಾವಾಗ?**
  ನೀವು ಮಾಹಿತಿ ಮತ್ತು ನಂಬಿಕೆಗೆ ಅರ್ಹವಾದ ಪುರಾವೆ ಕೊಟ್ಟಾಗ. ಈಗಾಗಲೇ ಶಾಸಕರೂ ನಮ್ಮ ಬಲೆಗೆ ಬಿದ್ದಿದ್ದಾರೆ. ಆಧಾರ ಸಿಕ್ಕರೆ ಸಂಪುಟ ದರ್ಜೆ ಸಚಿವರ ವಿರುದ್ಧವೂ ದಾಳಿ ಮಾಡಲು ನಾವು ತಯಾರ್.
- **ನ್ಯಾಯಾಂಗದ ಬಗ್ಗೆಯೂ ಜನ ನಂಬಿಕೆ ಕಳೆದುಕೊಳ್ಳುವ ವಾತಾವರಣ ನಿರ್ಮಾಣವಾಗುತ್ತಿದೆ?**
  ನಿಜ. ನ್ಯಾಯಾಂಗದಲ್ಲಿ ನ್ಯಾಯಾಂಗ ನಿಂದನೆ ಎಂಬ ಇನ್‌ಬಿಲ್ಟ್ ಪ್ರೊಟೆಕ್ಷನ್ ಸಿಸ್ಟಮ್ ಇದೆ. ನ್ಯಾಯಾಂಗ ವ್ಯವಸ್ಥೆಯಲ್ಲಿಯೂ ಬದಲಾವಣೆ ಆಗಬೇಕು. ರಾಷ್ಟ್ರೀಯ ಆಯೋಗವೊಂದು ಆರೋಪ ಹೊತ್ತ ನ್ಯಾಯಾಧೀಶರ ವಿರುದ್ಧ ತನಿಖೆ ನಡೆಸುವ ವ್ಯವಸ್ಥೆ ಬರಬೇಕು.
- **ಲೋಕಾಯುಕ್ತ ದಾಳಿಯಿಂದ ಭ್ರಷ್ಟರಲ್ಲಿ ಭೀತಿ ಮೂಡಿದೆಯಾ?**
  ಬಹಳಷ್ಟು ಜನರಲ್ಲಿ ಅಂಜಿಕೆ ಹುಟ್ಟಿದೆ. ಸರ್ಕಾರವೇ ಭ್ರಷ್ಟರ ರಕ್ಷಣೆಗೆ ನಿಲ್ಲುವುದು ನಮಗೆ ದೊಡ್ಡ ಅಡ್ಡಿ. ದಾಳಿಗೆ ಒಳಗಾದವರು ನಮ್ಮ ವಿರುದ್ಧವೇ ಪರಿಶಿಷ್ಟ ಜಾತಿ/ ಪಂಗಡದವರ ಮೇಲೆ ದೌರ್ಜನ್ಯ, ಮಾನನಷ್ಟ ಮೊಕದ್ದಮೆ ಹೂಡಿ ಬೆದರಿಸುವ ತಂತ್ರ ಅನುಸರಿಸುತ್ತಿದ್ದಾರೆ. ಯಾವುದಕ್ಕೂ ನಾವು ಬಗ್ಗುವುದಿಲ್ಲ.

### ಅಕ್ರಮ ಸಕ್ರಮ ಬೇಡ

**ಬೆಂಗಳೂರು:** ರಾಜ್ಯ ಸರ್ಕಾರ ತರಾತುರಿಯಲ್ಲಿ ಜಾರಿಗೊಳಿಸಲು ಹೊರಟಿರುವ ಅಕ್ರಮ ಸಕ್ರಮ ಯೋಜನೆ ಬಗ್ಗೆಯೇ ಲೋಕಾಯುಕ್ತರಿಗೆ ಅಸಮಾಧಾನವಿದೆ.

'ಮನೆ ನಿರ್ಮಾಣಕ್ಕೆ ಸಂಬಂಧಿಸಿ ಕರ್ನಾಟಕ ನಗರ ಯೋಜನಾ ಕಾಯ್ದೆಯಲ್ಲಿ ಕೆಲ ನಿಯಮಗಳಿವೆ. ಅವುಗಳನ್ನು ಉಲ್ಲಂಘಿಸಿ ಕಟ್ಟಲಾಗಿರುವ ಕಟ್ಟಡಗಳನ್ನು ಸರ್ಕಾರ ಸಕ್ರಮಗೊಳಿಸಲು ಹೊರಟಿದೆ. ಯೋಜನೆಯಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ಆದಾಯ ಬರಬಹುದು. ಆದರೆ ಇವತ್ತು ಕಾನೂನಿಗೆ ವಿರುದ್ಧವಾಗಿರುವುದನ್ನು ನಾಳೆ ಸಕ್ರಮ ಮಾಡಿದರೆ ಹೇಗೆ' ಎನ್ನುವುದು ಲೋಕಾಯುಕ್ತರ ಪ್ರಶ್ನೆ. ಅಕ್ಕಪಕ್ಕದವರಿಗೆ ತೊಂದರೆಯಾಗಬಾರದು. ಎಲ್ಲಾ ಮನೆಗಳಿಗೂ ಗಾಳಿ-ಬೆಳಕು ಸರಿಯಾಗಿ ಸಿಗುವಂತಾಗಲು ರೂಪಿಸಿರುವ ನಿಯಮ ಕಡೆಗಣಿಸಿ ನಿರ್ಮಿಸಿರುವ ಕಟ್ಟಡಗಳಿಂದ ಅಕ್ಕಪಕ್ಕದವರಿಗೆ ಸಮಸ್ಯೆಯಲ್ಲವೆ? ಹೀಗಾಗಿ ಇದು ಜನತೆ ಹಕ್ಕುಗಳ ಉಲ್ಲಂಘನೆ ಎಂಬುದು ಅವರ ಪ್ರತಿಪಾದನೆ.

'ಈವರೆಗೆ ಆಗಿರುವ ಅಕ್ರಮ ಕಟ್ಟಡಗಳ ಸಕ್ರಮ ಬೇಡ. ಇನ್ನು ಮುಂದೆ ಯಾವುದೇ ನಿರ್ಬಂಧಗಳಿಲ್ಲದೇ ತಮಗೆ ಬೇಕಾದ ರೀತಿಯಲ್ಲಿ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಲು ಕಾಯ್ದೆಗೇ ತಿದ್ದುಪಡಿ ತರಲಿ' ಎಂದರು.